ಹೇಳತೊಡಗಿದರು.

'ಬದುಕು ಅಂದ್ರೆ ಹೀಗೇನೇ. ಒಂದರ ಹಿಂದೆ ಇನ್ನೊಂದು, ಇನ್ನೊಂದರ ಎದುರು ಮತ್ತೊಂದು...'

ತಕ್ಷಣ ಕಸ್ತೂರ್‌ಬಾ, ಗಾಂಧಿ ಮಾತನ್ನು ತುಂಡರಿಸಿ 'ನಮ್ಮಿಬ್ಬರ ಹಾಗೆ' ಎಂದು ಬಿಟ್ಟರು. ಗಾಂಧಿ ಸ್ತಬ್ಧರಾದರು. ಕಸ್ತೂರ್‌ಬಾ ಅವರೇ ಮತ್ತೆ ಮಾತಿಗೆ ಎಳೆದರು.

'ನಮ್ಮಿಬ್ಬರ ವಿಷಯ ಬಿಡಿ, ನಿಮ್ಮಿಬ್ಬರ ವಿಷಯ ಹೇಳಿ.'

ಗಾಂಧಿ ಯಾರ ಬಗ್ಗೆ ಕೇಳುತ್ತಿರಬಹುದು ಎಂಬಂತೆ ನೋಡಿದರು.

'ಅದೇ, ನೀವು ಮತ್ತೆ ಅಂಬೇಡ್ಕರ್ ಯಾವುದಕ್ಕೆ ಎದುರುಬದರಾದ್ರಿ? ಹೇಳಿ ಸ್ವಲ್ಪ.'

ಆಗ ಗಾಂಧಿ ಸಂಕ್ಷಿಪ್ತವಾಗಿ, ಸರಳವಾಗಿ ವಿವರಿಸಿದರು: 'ಅಂಬೇಡ್ಕರ್ ಅವರು ಅಸ್ಪೃಶ್ಯರಿಗೆ ಎರಡು ಮತದಾನದ ಹಕ್ಕು ಅನ್ನೋದರ ಪರವಾಗಿದ್ರು. ಅಸ್ಪೃಶ್ಯರು ಮಾತ್ರ ಅಸ್ಪೃಶ್ಯ ಪ್ರತಿನಿಧಿ ಆಯ್ಕೆ ಮಾಡೋದು ಒಂದು; ಸಾಮಾನ್ಯ ಕ್ಷೇತ್ರದ ಪ್ರತಿನಿಧಿಗೆ ಮತ ಹಾಕೋದು ಇನ್ನೊಂದು: ಅಸ್ಪೃಶ್ಯರ ಪ್ರತ್ಯೇಕ ಮತಕ್ಷೇತ್ರದಲ್ಲಿ ಇತರೆಯವರು ಮತ ಹಾಕೋ ಹಾಗಿಲ್ಲ, ಇತರೆಯವರು ಪ್ರತಿನಿಧಿ ಆಗೋ ಹಾಗಿಲ್ಲ. ನಾನು ಇದಕ್ಕೆ ವಿರುದ್ಧವಾಗಿದ್ದೆ. ಉಪವಾಸ ಕೂತೆ. ಕೆಲವರು ಅಂಬೇಡ್ಕರ್ ವಾದ ಸರಿ ಅಂದ್ರು, ಇನ್ನು ಕೆಲವರು ನನ್ನ ವಾದ ಸರಿ ಅಂದ್ರು. ನನ್ನ ಪ್ರಕಾರ ಸಾಮಾನ್ಯ ಕ್ಷೇತ್ರದಲ್ಲೇ ಅಸ್ಪೃಶ್ಯರಿಗೆ ಮೀಸಲಿಡಬೇಕು, ಎಲ್ರೂ ಓಟ್ ಹಾಕಬೇಕು.'

ಎಲ್ಲವನ್ನು ಕೇಳಿದ ಕಸ್ತೂರ್ ಬಾ, 'ಅದೆಲ್ಲ ಆಗ್ಲೆ ಅಲ್ಪ ಸ್ವಲ್ಪ ತಿಳಿದಿತ್ತು. ಈಗ ನಿಮ್ಮ ಬಾಯಿಂದಾನೇ ಕೇಳಿ ಇನ್ನಷ್ಟು ಅರ್ಥ ಆಯ್ತು' ಎಂದಾಗ ಗಾಂಧಿಗೂ ಸಮಾಧಾನವಾಯಿತು. ಕಸ್ತೂರ್‌ಬಾ ಮುಂದುವರೆಸಿದರು:

'ಯಾರ ವಾದ ಸರಿ ಅಂತ ಹೇಳೊ ಪಾಂಡಿತ್ಯ ನನಗಿಲ್ಲ. ಅದೆಲ್ಲ ನಂಗೆ ಅರ್ಥ ಆಗೊಲ್ಲ. ಆದ್ರೆ ನೀವು ಮಾತೆತ್ತಿದ್ರೆ ಉಪವಾಸ ಕೂತ್ಕೊತೀರಿ ಅನ್ನೋದ್ ಮಾತ್ರ ಅರ್ಥ ಆಗಿದೆ.'

ಕಸ್ತೂರ್‌ಬಾ ಮಾತಿಗೆ ಗಾಂಧಿ ಮರು ಮಾತಾಡಲಿಲ್ಲ.

'ನೀವು ಪುಣೆ ಜೈಲಲ್ಲಿ ಈ ವಿಷಯಕ್ಕೆ ಉಪವಾಸ ಕೂತಾಗ ನಂಗೆ ಭಯಾನೇ ಆಗಿತ್ತು' ಎಂದರು ಕಸ್ತೂರ್‌ಬಾ.

'ಭಯ ಯಾಕೆ? ನನ್ನ ಸತ್ಯಾಗ್ರಹದ ಕಲ್ಪನೇಲಿ, ಅಹಿಂಸೆಯ ಪ್ರತಿಪಾದನೇಲಿ ನೀನೂ ನಿನ್ನ ನಡೆನುಡಿ ಪ್ರೇರಣೆ ಅಂತ ಹಿಂದೇನೇ ಹೇಳಿದ್ದೆ. ಗೊತ್ತ?'

ಕಸ್ತೂರ್ ಕಣ್ಣರಳಿಸಿ ಕೇಳಿಸಿಕೊಂಡರು. ಗಾಂಧಿ ತಮ್ಮ ಮಾತನ್ನು ಮುಂದುವರಿಸಿದರು. ಉತ್ತೇಜಿತರಾಗಿ ಹೇಳಿದರು.

'ನೀನು, ನಿನ್ನ ಜೀವನದಲ್ಲಿ ಅಳವಡಿಸಿಕೊಂಡಿರೋ ನೀತಿ ನಿಯಮಗಳ ವಿಸ್ತರಣೆಯೇ ನನ್ನ ಸತ್ಯಾಗ್ರಹದ ನೀತಿನಿಯಮ ಅಂತ ಬರ್ದಿದ್ದೀನಿ. ನಿನ್ನ ವ್ಯಕ್ತಿತ್ವದ ಪ್ರತಿಫಲವೇ ಅಹಿಂಸೆಯ ತತ್ವ ಅಂತಾನೂ ಹೇಳಿದ್ದೀನಿ.'

ಕಸ್ತೂರ್‌ಬಾ ಸಂತೋಷಪಟ್ಟರು. ಅಲ್ಲೀವರೆಗೆ ಕಣ್ಣಲ್ಲಿ ಬರುತ್ತಿದ್ದ ನೋವಿನ ಹನಿಯ ಬದಲು ಆನಂದಬಾಷ್ಪ ಬಂದಿತ್ತು. ಗಾಂಧಿ ಮನ ಸಮಾಧಾನಗೊಂಡಿತು. ಆದರೂ ಕಸ್ತೂರ್‌ಬಾಗೆ ಒಂದು ಅನುಮಾನ ಕಾಡಿತು.

'ಇಷ್ಟೆಲ್ಲ ಹೇಳಿದ್ರಿ, ಬರೆದ್ರಿ. ಆದ್ರೆ ನಾವು ಎದುರುಬದರಾಗ್ತಾನೆ ಇದ್ವಿ! ಯಾಕೆ ಅಂತಾನೆ ಅರ್ಥ ಆಗಿರಲಿಲ್ಲ. ಹೋಗ್ಲಿ ಬಿಡಿ, ನಿಮಗೆ ನಾನ್ ಅರ್ಥ ಆಗಿದ್ದೆ ಅಂತ, ಈಗ್ಲಾದ್ರೂ ನಂಗ್ ಅರ್ಥ ಆಯ್ತು.'

'ಯಾಕ್ ಹಾಗಂತೀಯ? ಪರಸ್ಪರ ಅರ್ಥ ಮಾಡ್ಕೊಂಡು ಬೆಳೆಯೋದೇ ಬದುಕು. ನಾವಿಬ್ಬರು ಒರೆಗಲ್ಲು ಇದ್ದ ಹಾಗೆ. ನೀನು ನನಗೆ ಒರೆಗಲ್ಲು, ನಾನು ನಿನಗೆ ಒರೆಗಲ್ಲು.'

'ಒರೆಗಲ್ಲುಗಳು ಎದುರು ಬದುರಾಗೋದರಲ್ಲೂ ವ್ಯಕ್ತಿತ್ವ ಬೆಳೆಯುತ್ತೆ. ಎದುರಾಗ್ತಾನೇ ಒಂದಾಗೋದು ಸಾಧ್ಯ ಆಗುತ್ತೆ.'

ಗಾಂಧಿ ನೀಡಿದ ತತ್ವಜ್ಞಾನಿಯಂತಹ ಮಾತು ಕಸ್ತೂರ್‌ಬಾಗೆ ಅರ್ಥವಾಯಿತು. ಆದರೂ ಅದೇ ಸಂದರ್ಭದಲ್ಲಿ ಪ್ರಶ್ನೆಯೊಂದು ಎದ್ದಿತು.

'ಅದ್ಸರಿ, ನೀವೂ ಅಂಬೇಡ್ಕರ್ ಸಾಹೇಬರೂ ಒರೆಗಲ್ಲೇ ಅಲ್ವ? ಎದುರಾಗ್ತಾನೇ ಒಂದಾಗ್ಲಿಲ್ಲ ಯಾಕೆ?'

ಗಾಂಧಿ, ಈ ಪ್ರಶ್ನೆಯಿಂದ ಕ್ಷಣಕಾಲ ಸ್ತಬ್ಧವಾದರು. ತಮ್ಮೊಳಗೆ ತಾವೇ ಇಳಿದರು. ಮರುಕ್ಷಣವೇ ಮಾತು ಬಂದಂತಾಗಿ ನುಡಿದರು.

'ಸಾಂಸಾರಿಕ ಭಿನ್ನಾಭಿಪ್ರಾಯಕ್ಕೂ ತಾತ್ವಿಕ ಭಿನ್ನಾಭಿಪ್ರಾಯಕ್ಕೂ ವ್ಯತ್ಯಾಸ ಇರುತ್ತೆ ಕಸ್ತೂರ್. ನನಗೂ ನಿನಗೂ ಇದ್ದದ್ದು ಸಾಂಸಾರಿಕ ಭಿನ್ನಾಭಿಪ್ರಾಯ. ಇದು ವೈಯಕ್ತಿಕ. ಅಂಬೇಡ್ಕರ್ ಅವರಿಗೂ ನನಗೂ ಇದ್ದದ್ದು ತಾತ್ವಿಕ ಭಿನ್ನಾಭಿಪ್ರಾಯ. ವೈಯಕ್ತಿಕ ಅಲ್ಲ.'

'ಅದೇನೊ ಒಟ್ನಲ್ಲಿ ನಿಮ್ಮಿಬ್ಬರ ಭಿನ್ನಾಭಿಪ್ರಾಯದಲ್ಲಿ ನೀವು ಉಪವಾಸ ಕೂತಾಗ ಉಳೀತೀರೊ ಇಲ್ವೊ ಅನ್ನಿಸ್ತು. ನೆನಪಿಸ್ಕೊಂಡ್ರೆ ಈಗಲೂ ನನ್ನ ಜೀವ ನಡುಗುತ್ತೆ.'

ಕಸ್ತೂರ್‌ಬಾಗೆ ಮುಂದೆ ಮಾತನಾಡಲು ಆಗಲಿಲ್ಲ. ಅಂದಿನ ದಿನಗಳಿಗೆ ಮನದ ಪಯಣ ಸಾಗಿತು.

* * *

ವಾರ್ಧಾ ಆಶ್ರಮದಲ್ಲಿ ಕಸ್ತೂರ್‌ಬಾ ಒಂಟಿಯಾಗಿ ಕೂತಿದ್ದರು. ಯಾರ ಜೊತೆಯೂ ಹೆಚ್ಚು ಮಾತಾಡುತ್ತಿರಲಿಲ್ಲ. ಅವರಿಗೆ ಗಾಂಧಿಯದೇ ಚಿಂತೆ ಆಗಿತ್ತು. ಗಾಂಧಿಯವರ ಆರೋಗ್ಯ ತನ್ನ ಅರೋಗ್ಯದಷ್ಟು ಕೆಟ್ಟಿರಲಿಲ್ಲವಾದರೂ ತುಂಬಾ ಚೆನ್ನಾಗಿತ್ತೆಂದು ಹೇಳಲಾಗದು. ಈಗ ಆಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ. ಅವರು ಹಟಕ್ಕೆ ಬಿದ್ದರೆ ಯಾರ ಮಾತನ್ನೂ ಕೇಳುವುದಿಲ್ಲವೆಂದು ಕಸ್ತೂರ್‌ಬಾ ಅವರಿಗೆ ಗೊತ್ತಿತ್ತು. ಹಾಗೆಂದು ಅವರ ಹಟವನ್ನು ಅರ್ಥವಿಲ್ಲದ ಚಟ ಎಂದು ತಿಳಿಯುವುದು ತಪ್ಪು ಎಂಬ ಅರಿವೂ ಇತ್ತು. ಅವರಿಗೆ ಪ್ರಾಮಾಣಿಕವಾಗಿ ಅನ್ನಿಸಿದ್ದಕ್ಕೆ ಹಟ ಮಾಡುತ್ತಿದ್ದರು. ತನ್ನಂಥವರಿಗೆ ಹಟ ಅನ್ನಿಸಿದ್ದು ಹೊರಜಗತ್ತಿಗೆ ಹೋರಾಟ ಅನ್ನಿಸಿತ್ತು.

ಆಶ್ರಮದಲ್ಲಿ ಜನರಿದ್ದೂ ಒಂಟಿತನ
ಗಾಂಧಿ ಜೀವದ ಚಿಂತೆ ಕಾಡಿತು;
ಕೂತಲ್ಲೇ ಕಾರಾಗೃಹದ ಮನ
ಸುಳಿಸುತ್ತಿ ಶೋಕಗೀತೆಯಾಯಿತು.

ಕೋಣೆಯಲ್ಲಿ ಒಬ್ಬರೇ ಕೂತಿದ್ದಾಗ ಮಹದೇವ ದೇಸಾಯಿ, ದೇವದಾಸ್ ಬಂದರು. ಮೌನದಲ್ಲಿ ಮೌನವಾಗಿ ತಾವೂ ಕೂತರು. ಕಡೆಗೆ ಕಸ್ತೂರ್‌ಬಾ ಅವರೇ ಮಾತಾಡಿದರು.

'ಬಾಪು ಉಪವಾಸ ನಿಲ್ಲಿಸೊ ಸೂಚನೆ ಏನೂ ಇಲ್ವ?'

'ಸದ್ಯಕ್ಕೆ ಕಾಣಿಸ್ತಾ ಇಲ್ಲ ತಾಯಿ' ಎಂದು ಮಹದೇವ ದೇಸಾಯಿ ಹೇಳಿದರು.

ಕಸ್ತೂರ್‌ಬಾ ಮತ್ತೆ ಮೌನವಾದರು.

ಮಹದೇವ ದೇಸಾಯಿಯೇ ಮತ್ತೆ ಮಾತಾಡಿದರು.

'ಅಂಬೇಡ್ಕರ್ ಅವರ ಹತ್ರ ಅನೇಕರು ಮಾತಾಡ್ತಾ ಇದಾರೆ. ಆದ್ರೆ ಅವರ ವಾದಕ್ಕೆ ಅವರು ಬದ್ಧರಾಗಿದಾರೆ. ನಾವೂ ಒಂದು ಪ್ರಯತ್ನ ಮಾಡಿದ್ರೆ ಹೇಗೆಂತ ಯೋಚಿಸ್ತಿದ್ದೆ.'

ಏನು ಎಂಬಂತೆ ಕಸ್ತೂರ್‌ಬಾ ನೋಡಿದರು.

ಆಗ ದೇವದಾಸ್ ಹೇಳಿದ: 'ನಾನೇ ಹೋಗಿ ಅಂಬೇಡ್ಕರ್ ಸಾಹೇಬ್ರನ್ನ ಕೈಮುಗಿದು ಕೇಳ್ಕೋತೀನಿ.'

ಕಸ್ತೂರ್‌ಬಾ ಕ್ಷಣಕಾಲ ಯೋಚಿಸಿದರು.

'ನಾನೂ ಬರ್ತೀನಿ, ನಾನೂ ಬೇಡ್ಕೊಳ್ತೀನಿ.'

ಮಹದೇವ ದೇಸಾಯಿಗೆ ಸರಿ ಎನ್ನಿಸಿತು.

'ಅಂಬೇಡ್ಕರ್ ಅವ್ರಿಗೆ ಸುದ್ದಿ ಮುಟ್ಟಿಸ್ತೀನಿ' ಎಂದು ಎದ್ದರು.

ಮಾರನೇ ದಿನವೇ ಮೂವರೂ ಅಂಬೇಡ್ಕರ್ ಅವರ ಮನೆಗೆ ಹೋದರು. ಅಂಬೇಡ್ಕರ್ ಮತ್ತು ಅವರ ಪತ್ನಿ ರಮಾಬಾಯಿ ಇಬ್ಬರೂ ಬಾಗಿಲ ಬಳಿಯೇ ಬಂದು ಸ್ವಾಗತಿಸಿ ಒಳಗೆ ಕರೆದೊಯ್ದರು. ರಮಾಬಾಯಿಯವರು ಕಸ್ತೂರ್‌ಬಾ ಅವರ ಕೈಹಿಡಿದು 'ಕುಡಿಯೋದಕ್ಕೆ ಕಾಫಿ ತರ್ತೀನಿ' ಎಂದರು. ಕಸ್ತೂರ್‌ಬಾ 'ಬೇಡಿ, ನಾನ್ ಕಾಫಿ ಕುಡಿಯೊಲ್ಲ' ಎಂದಾಗ ರಮಾಬಾಯಿ, 'ಮೊದಲ್ನೇ ಸಾರಿ ಮನೇಗ್ ಬಂದಿದ್ದೀರಿ. ಮಜ್ಜಿಗೆ ಕೊಡ್ತೀನಿ' ಎಂದರು. ಕಸ್ತೂರ್‌ಬಾ 'ತೊಂದ್ರೆ ತಗೋಬೇಡಿ ತಾಯಿ. ಡಾಕ್ಟರ್ ಸಾಹೇಬ್ರು ಹತ್ರ ಮಾತಾಡೋದ್ ಮುಖ್ಯ' ಎಂದರು.

ಅಂಬೇಡ್ಕರ್, ತಮ್ಮ ಕೋಣೆಗೆ ಮೂವರನ್ನೂ ಕರೆದೊಯ್ದರು. ಇವರ ಮಾತಿಗೆ ರಮಾಬಾಯಿಯವರೂ ಸಾಕ್ಷಿಯಾದರು. ವಾರ್ಧಾ ಆಶ್ರಮಕ್ಕೆ ಅಂಬೇಡ್ಕರ್ ಅವರು ಹೋದಾಗ ಕಸ್ತೂರ್‌ಬಾ ಇದ್ದಂತೆ ಇಲ್ಲಿ ರಮಾಬಾಯಿ.

ಅಂಬೇಡ್ಕರ್ ಅವರೇ ಮಾತಿಗೆ ಶುರುಮಾಡಿದರು. 'ಇಷ್ಟು ದೂರ ಬಂದಿದ್ದೀರಿ. ಹೇಳಿ ತಾಯಿ, ಏನ್ ವಿಷಯ?' ಎಂದರು, ಕಸ್ತೂರ್‌ಬಾಗೆ ಹೇಗೆ ಮಾತು ಆರಂಭಿಸುವುದೆಂದು ತಿಳಿಯಲಿಲ್ಲ. ರಮಾಬಾಯಿಯವರು 'ಹೇಳಿ ತಾಯಿ, ಪರವಾಗಿಲ್ಲ. ಹಿಂಜರಿಕೆ ಯಾಕೆ?' ಎಂದು